# BANGALORE WATER SUPPLY AND SEWERAGE BOARD

FORM NO. E - 5

## ELECTRONIC CLEARING SERVICE (DEBIT CLEARING)
## MANDATE FORM

No.____________________

| | |
|---|---|
| 1. Customer's Registered name | |
| 2. Name & address of the consumer<br><br>Phone No. : Res. / Off. / Mob. / E-mail | |
| 3. Name of the Sub-Division | |
| 4. R.R. No. | |
| 5. **Particulars of Bank account** | |
| a) Bank name | |
| b) Branch name | |
| c) 9-Digit code number of the Bank & branch appearing on the MICR Cheque issued by the bank (Please attach the photocopy of a cheque or a Blank cancelled cheque issued by your bank for verifying the accuracy of the code number) | |
| d) Account type (S.B. Account/Current Account or Cash Credit) with code 10/11/13 | |
| e) Ledger No / Ledger Folio No. | |
| f) Account Number (As appearing on the cheque book) | |
| g) Name of the Account holder | |
| 6. Date of effect | |

I, hereby, declare that the particulars given above are correct and complete. If the transaction is delayed or not effected at all for reasons of incomplete or incorrect information, I would not hold the user institution responsible. I have read the option invitation letter and agree to discharge the responsibility expected of me as a participant under E.C.S. scheme and authorise Assistant Executive Engineer__________________ Sub-Division to recover the regular monthly water bills.

Date :

..........................................................
Signature of the investor / customer

I have given today standing instructions to my Bank to recover the regular monthly water bills from my Account No....................................

Signature of the Account Holder

Bank's Stamp :
Date :

..........................................................
Signature of the Authorised / Official from the Bank

# ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿ

## ವಿದ್ಯುನ್ಮಾನ ಪಾವತಿ ಸೇವೆ(ಇ.ಸಿ.ಎಸ್.)- ಅನುಮೋದನಾ ಪತ್ರ

ಇ.ಸಿ.ಎಸ್.ಯೋಜನೆಯಲ್ಲಿ ಪ್ರತಿ ತಿಂಗಳ ನೀರಿನ ಬಿಲ್ ಪಾವತಿ ಮಾಡಲು ಬಳಕೆದಾರರು ನೀಡುವ ಒಪ್ಪಿಗೆ ಪತ್ರ

ನಂ_____________

| | |
|---|---|
| ೧. ನೋಂದಾಯಿತ ಬಳಕೆದಾರರ ಹೆಸರು | |
| ೨. ಬಳಕೆದಾರರ ಹೆಸರು ಮತ್ತು ವಿಳಾಸ<br>ದೂರವಾಣಿ ಸಂಖ್ಯೆ<br>ಕಛೇರಿ/ಮನೆ/ಮೋಬೈಲ್/ಇ-ಮೇಲ್ | |
| ೩. ಉಪವಿಭಾಗದ ಹೆಸರು | |
| ೪. ಆರ್.ಆರ್.ನಂಬರ್ | |
| ೫. ಬ್ಯಾಂಕ್ ವಿವರ | |
| ಅ.ಬ್ಯಾಂಕಿನ ಹೆಸರು | |
| ಆ.ಬ್ಯಾಂಕಿನ ಶಾಖೆಯ ಹೆಸರು | |
| ಇ.ಎಂ.ಐ.ಸಿ.ಆರ್.ಕೋಡ್ ನಂಬರ್<br>(ಚೆಕ್ ಪ್ರತಿ ಲಗತ್ತಿಸಿ) | |
| ಈ.ಖಾತೆ ವರ್ಗ (ಉಳಿತಾಯ/ಚಾಲ್ತಿ/ಸಿ.ಸಿ)<br>(೧೦/೧೧/೧೨) | |
| ಉ.ಲೆಡ್ಜರ್ ಸಂಖ್ಯೆ/ಲೆಡ್ಜರ್ ಪೋಲಿಯೋ ಸಂಖ್ಯೆ | |
| ಊ.ಖಾತೆ ನಂಬರ್ | |
| ಋ.ಖಾತೆ ಹೊಂದಿದವರ ಹೆಸರು | |
| ೠ.ಜಾರಿಗೆ ಬರುವ ದಿನಾಂಕ | |

ಮೇಲ್ಕಂಡ ಮಾಹಿತಿ ಸರಿಯಾಗಿದೆ ಮತ್ತು ಸಂಪೂರ್ಣವಾಗಿದೆಯೆಂದು ಈ ಮೂಲಕ ಘೋಷಿಸುತ್ತೇನೆ. ಅಸಂಪೂರ್ಣ ಅಥವಾ ತಪ್ಪು ಮಾಹಿತಿಯ ಕಾರಣದಿಂದ ವಿಳಂಬವಾಗುವುದು ಅಥವಾ ಸೌಲಭ್ಯಜಾರಿಗೆ ಬಾರದೆ ಹೋದಲ್ಲಿ ಅದಕ್ಕೆ ಸಂಸ್ಥೆಯನ್ನು ಹೊಣೆ ಮಾಡುವುದಿಲ್ಲ. ನಾನು ಬೆಂಗಳೂರು ಜಲಮಂಡಲಿಯು ನಿಯೋಜಿಸಿದ ಇ.ಸಿ.ಎಸ್ ಯೋಜನೆ ಮೂಲಕ ನೀರಿನ ಬಿಲ್ಲನ್ನು ಪಾವತಿ ಮಾಡಲು ಸಮ್ಮತಿಸಿದ್ದೇನೆ ಮತ್ತು ------------------ ಉಪವಿಭಾಗ ಸಹಾಯಕ ಅಭಿಯಂತರರಿಗೆ ನನ್ನ ಪ್ರತಿ ತಿಂಗಳ ಬಿಲ್ಲನ್ನು ಇ.ಸಿ.ಎಸ್ ಯೋಜನೆಯ ಮೂಲಕ ಮೇಲೆ ತಿಳಿಸಿದ ಬ್ಯಾಂಕ್ ಖಾತೆ ನಂಬರ್ ---------------ನಿಂದ ಮುರಿದು ಕೊಳ್ಳಲು ಅಧಿಕಾರ ಕೊಟ್ಟಿರುತ್ತೇನೆ.

ದಿನಾಂಕ:

ಬಳಕೆದಾರರ ಸಹಿ

ಈ ದಿನ ನಾನು ಬ್ಯಾಂಕಿನವರಿಗೆ ನನ್ನ ಪ್ರತಿ ತಿಂಗಳ ವಿದ್ಯುತ್ ಬಿಲ್ಲನ್ನು ಇ.ಸಿ.ಎಸ್ ಯೋಜನೆಯ ಮೂಲಕ ಬ್ಯಾಂಕ್ ಖಾತೆ ನಂ--------------------ನಿಂದ ಮುರಿದುಕೊಳ್ಳುವಂತೆ ಖಾಯಂ ಆದೇಶವನ್ನು ಕೊಟ್ಟಿರುತ್ತೇನೆ.

ಖಾತೆದಾರರ ಸಹಿ

ಬ್ಯಾಂಕಿನವರ ಸಹಿ ಮತ್ತು ಮೊಹರು

ಬೆಂಗಳೂರು ಮಹಾನಗರದ ನಾಗರೀಕರು ತಮ್ಮ ಜಲಪೂರೈಕೆ ಸಂಪರ್ಕಗಳ ನೀರಿನ ಬಳಕೆಯ ಬಿಲ್ಲುಗಳನ್ನು ಪಾವತಿ ಮಾಡುವ ಅನುಕೂಲಕ್ಕಾಗಿ ಬೆಂಗಳೂರು ಜಲಮಂಡಲಿಯು "ವಿದ್ಯುನ್ಮಾನ ಪಾವತಿ ವ್ಯವಸ್ಥೆ" (Electronic Clearing System)ಯನ್ನು ಜಾರಿಗೆ ತರುತ್ತಿರುವುದನ್ನು ಪ್ರಕಟಿಸಲು ಹರ್ಷಿಸುತ್ತಿದ್ದೇವೆ.ಈ ಮೂಲಕ, ಮುಂದುವರೆದ ರಾಷ್ಟ್ರಗಳಲ್ಲಿ ನಾಗರೀಕರು ಪಡೆಯುತ್ತಿರುವ ಸೌಲಭ್ಯವನ್ನು ಭಾರತ ದೇಶದಲ್ಲಿ ತನ್ನ ಬಳಕೆದಾರರಿಗೆ ಒದಗಿಸುವ ಪ್ರಪ್ರಥಮವಾಗಿ ಸಂಸ್ಥೆಯಾಗಲು ಬೆಂಗಳೂರು ಜಲಮಂಡಲಿಯು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ. ಇದರಲ್ಲಿ ತನ್ನ ಯಾವ ಸ್ವಾರ್ಥವು ಇಲ್ಲದೇ ಕೇವಲ ಬೆಂಗಳೂರು ಮಹಾನಗರದ ನಾಗರೀಕರಿಗೆ ನವೀನ ಮಾದರಿಯ ಸೌಲಭ್ಯವನ್ನೊದಗಿಸಲು ಶ್ರಮಿಸುತ್ತಿರುವ ಜಲಮಂಡಲಿಯ ಈ ಕ್ರಮಗಳಿಗೆ ಬೆಂಗಳೂರು ಮಹಾನಗರದ ನಾಗರೀಕರು ಸ್ಪಂದಿಸುವರೆಂಬ ಭರವಸೆಯಿಂದ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಭಾರತದ "ಸಿಲಿಕಾನ್ ಕಣಿವೆ"ಯೆಂಬ ಹೆಗ್ಗಳಿಕೆಯನ್ನು ಮತ್ತು ಮಾಹಿತಿ ತಂತ್ರ ಜ್ಞಾನದಲ್ಲಿ ಮುಂಚೂಣಿಯಲ್ಲಿರುವ ವಿಶ್ವದ ಪ್ರಥಮ ಐದು ನಗರಗಳಲ್ಲೊಂದು ಎಂಬ ಪ್ರತಿಷ್ಠೆಯನ್ನು ಪಡೆದಿರುವ ಬೆಂಗಳೂರು ಮಹಾನಗರದ ಕೀರ್ತಿಯನ್ನು ಎತ್ತಿ ಹಿಡಿಯುವ ಬೆಂಗಳೂರು ಜಲಮಂಡಲಿಯ ಈ ಪ್ರಯತ್ನದ ಕಿರು ಪರಿಚಯ ಕೆಳಗಿನಂತಿದೆ.

ಪ್ರಸ್ತುತ ಆಚರಣೆಯಲ್ಲಿರುವ ವ್ಯವಸ್ಥೆಯಲ್ಲಿ ಜಲಮಂಡಲಿಯ ಜಲಮಾಪಕ ವಾಚನಕಾರರು ಪ್ರತಿಯೊಬ್ಬ ಬಳಕೆದಾರರ ನಿವೇಶನಕ್ಕೆ ತೆರಳಿ, ಮಾಪಕದ ವಾಚನ ಮಾಡಿ, ಅದರಲ್ಲಿ ಬಳಕೆಯಾಗಿರುವ ನೀರಿನ ಪ್ರಮಾಣವನ್ನು ಲೆಖ್ಖ ಹಾಕಿ, ಗಣಕೀಕೃತ ಬಿಲ್ಲುಗಳನ್ನು ಬಳಕೆದಾರರಿಗೆ ನೀಡಲಾಗುತ್ತಿದೆ. ಈ ಬಿಲ್ಲುಗಳನ್ನು ಪಾವತಿ ಮಾಡಲು ಬಳಕೆದಾರರಿಗೆ ಮಾಪಕ ವಾಚನ ಮಾಡಿದ ದಿನದಿಂದ ಗರಿಷ್ಠ ಹದಿನೈದು ದಿನಗಳ ಕಾಲಾವಕಾಶವಿರುತ್ತದೆ. ಈ ಅವಧಿಯೊಳಗೆ ಯಾವಾಗಲಾದರೂ ಬಳಕೆದಾರರು ತಮ್ಮ ಬಿಲ್ಲುಗಳನ್ನು ಜಲಮಂಡಲಿಯ ನಗದು ಗಲ್ಲೆಗಳಲ್ಲಿ ಪಾವತಿ ಮಾಡಬಹುದಾಗಿದೆ. ಕಾಲಾವಕಾಶ ಮೀರಿ ಪಾವತಿಯಾಗುವ ಬಿಲ್ಲುಗಳಿಗೆ ಮಂಡಲಿಯ ನಿಯಮಗಳಂತೆ ಸೂಕ್ತ ಬಡ್ಡಿಯನ್ನು ವಿಧಿಸಲಾಗುತ್ತದೆ. ಪಾವತಿಯಾಗುವ ಮೊತ್ತವನ್ನು ಆಯಾ ದಿನದಂದೇ ಆಯಾ ಬಳಕೆದಾರರ ಸಂಪರ್ಕದ ಲೆಖ್ಖಗಳಿಗೆ ಕಛೇರಿಯ ಜಂಜರು ಪುಸ್ತಕಗಳಲ್ಲಿಯೂ ಹಾಗೂ ಗಣಕಯಂತ್ರದ ಲೆಖ್ಖದಲ್ಲಿಯೂ ಜಮಾ ಮಾಡಲಾಗುತ್ತಿದೆ. ಈ ವ್ಯವಸ್ಥೆಯಲ್ಲಿ ಬಳಕೆದಾರರು ಪಾವತಿ ಮಾಡುವ ನಗದು ನೇರವಾಗಿ ಜಲಮಂಡಲಿಗೆ ಸೇರುತ್ತದೆ. ಆದರೆ, ಬಳಕೆದಾರರು ಹಣ ಪಾವತಿ ಮಾಡಲು ತಮ್ಮ ಮನೆಯಿಂದ ಜಲಮಂಡಲಿಯ ನಗದು ಗಲ್ಲೆಯವರೆವಿಗೂ ನಡೆದು ಬಂದು, ಉದ್ದವಾದ ಸರತಿಯ ಸಾಲಿನಲ್ಲಿ ನಿಂತು, ಹಣ ಪಾವತಿ ಮಾಡಿ ಹಿಂತಿರುಗಿ ಹೋಗಬೇಕು. ಇದಕ್ಕಾಗಿ ಬಳಕೆದಾರರು ತಮ್ಮ ಅಮೂಲ್ಯವಾದ ಸಮಯವನ್ನು ವ್ಯಯಿಸುವುದರ ಜೊತೆಗೆ ಸಾಕಷ್ಟು ಬೆವರು ಸುರಿಸಬೇಕಿರುತ್ತದೆ. ಬೆಂಗಳೂರು ಮಹಾನಗರದ ಜನದಟ್ಟಣೆ ಮತ್ತು ಅಗಾಧವಾದ ವಾಹನ ಸಂಚಾರದಿಂದ ನಿಗದಿತ ಸಮಯದೊಳಗೆ ಜಲಮಂಡಲಿಯ ನಗದುಗಲ್ಲೆಯನ್ನು ತಲುಪಲಾಗದೇ ಹಣ ಪಾವತಿಯಾಗದಿದ್ದಲ್ಲಿ ಹಾಗೂ ಬಿಲ್ಲಿನ ಪಾವತಿಯ ಕಾಲಾವಧಿ ತೀರಿ ಹೋಗಿದ್ದಲ್ಲಿ, ಬಳಕೆದಾರರ ಆ ದಿನದ ಶ್ರಮ ವ್ಯರ್ಥವಾಗುವುದರ ಜೊತೆಗೆ ಅನಾವಶ್ಯಕವಾಗಿ ಬಡ್ಡಿಯ ಹೊರೆಯೂ ಸಹಾ ಬೀಳುತ್ತದೆ. ಒಂದು ವೇಳೆ ಬಾಕಿ ಮೊತ್ತವು ಹೆಚ್ಚಾದಲ್ಲಿ ಜಲಪೂರೈಕೆ ಸಂಪರ್ಕವು ಕಡಿತವಾಗುವುದಕ್ಕೆ ಆಸ್ಪದ ನೀಡಿದಂತಾಗುತ್ತದೆ. ಆದ್ದರಿಂದ, ಈ ವ್ಯವಸ್ಥೆಯಲ್ಲಿ ಬಳಕೆದಾರರು ಸದಾ ಜಾಗ್ರತರಾಗಿರಬೇಕಿರುತ್ತದೆ.

ಬಳಕೆದಾರರ ಈ ಬವಣೆಯನ್ನು ನಿವಾರಿಸುವ ಸಲುವಾಗಿ ಜಲಮಂಡಲಿಯು "ವಿದ್ಯುನ್ಮಾನ ಪಾವತಿ ವ್ಯವಸ್ಥೆ" (Electronic Clearing System)ಯನ್ನು ಜಾರಿಗೆ ತಂದಿದೆ. ಈ ನೂತನ ವ್ಯವಸ್ಥೆಯಲ್ಲಿ ಆಚರಣೆಯಲ್ಲಿರುವಂತೆ ಜಲಮಂಡಲಿಯ ಜಲಮಾಪಕ ವಾಚನಕಾರರು ಪ್ರತಿಯೊಬ್ಬ ಬಳಕೆದಾರರ ನಿವೇಶನಕ್ಕೆ ತೆರಳಿ, ಮಾಪಕದ ವಾಚನ ಮಾಡಿ, ಎಂದಿನಂತೆ ಬಳಕೆಯಾಗಿರುವ ನೀರಿನ ಪ್ರಮಾಣವನ್ನು ಲೆಖ್ಖ ಹಾಕಿ, ಗಣಕೀಕೃತ ಬಿಲ್ಲುಗಳನ್ನು ಬಳಕೆದಾರರಿಗೆ ನೀಡುತ್ತಾರೆ. ಆದರೆ, "ವಿದ್ಯುನ್ಮಾನ ತೀರುವಳಿ ವ್ಯವಸ್ಥೆ" (Electronic Clearing System)ಗೊಳಪಡಲು ಇಚ್ಛಿಸುವ ಬಳಕೆದಾರರು ಈ ಬಿಲ್ಲುಗಳನ್ನು ಪಾವತಿ ಮಾಡಬೇಕಿರುವುದಿಲ್ಲ. ಬಳಕೆಯಾಗಿರುವ ನೀರಿನ ಪ್ರಮಾಣ ಮತ್ತು ಬಿಲ್ಲಿನ ಮೊತ್ತದ ಬಗ್ಗೆ ಬಳಕೆದಾರರ ಗಮನಕ್ಕೆ ತರಲು ಮಾತ್ರ ಈ ಬಿಲ್ಲುಗಳನ್ನು ನೀಡಲಾಗುತ್ತದೆ. ಜೊತೆಗೆ, "ಈ ಬಿಲ್ಲುಗಳು ಪಾವತಿ ಮಾಡಲು ಅಲ್ಲ" ಎಂಬ ಸಂದೇಶವು ಬಿಲ್ಲುಗಳ ಮೇಲೆ ಮುದ್ರಿತವಾಗಿರುತ್ತದೆ. "ವಿದ್ಯುನ್ಮಾನ ತೀರುವಳಿ ವ್ಯವಸ್ಥೆ"ಯಲ್ಲಿ ಪಾವತಿ ಮಾಡಲು ಸಮ್ಮತಿಸುವ ಬಳಕೆದಾರರು ತಾವು ಇಚ್ಛಿಸುವ, ತಮ್ಮ ಅಥವಾ ತಮ್ಮ ಕುಟುಂಬದ ಸದಸ್ಯರು ಖಾತೆ ಹೊಂದಿರುವ ಯಾವುದೇ ಬ್ಯಾಂಕ್‌ನ ಖಾತಾ ಸಂಖ್ಯೆಯನ್ನು ನೀಡಿದಲ್ಲಿ ಬಿಲ್ಲಿನ ಮೊತ್ತವನ್ನು ಆ ಖಾತೆಯಿಂದ ಬಳಕೆದಾರರ ಸಂಪರ್ಕದ ಖಾತೆಗೆ ತಂತಾನೆ ಜಮೆಯಾಗುವುದು. ಇದರಿಂದಾಗಿ ಬಳಕೆದಾರರು ಹಣ ಪಾವತಿ ಮಾಡಲು ತಮ್ಮ ಮನೆಯಿಂದ ಜಲಮಂಡಲಿಯ ನಗದು ಗಲ್ಲೆಯವರೆವಿಗೂ ನಡೆದು ಹೋಗುವ, ಸಾಲಿನಲ್ಲಿ ನಿಂತು ಹಣ ಪಾವತಿ ಮಾಡುವ, ತಮ್ಮ ಅಮೂಲ್ಯವಾದ ಸಮಯವನ್ನು ವ್ಯಯಿಸುವುವ ಪ್ರಮೇಯವೇ ಉದ್ಭವಿಸುವುದಿಲ್ಲ. ಬೆಂಗಳೂರು ಮಹಾನಗರದ ಜನದಟ್ಟಣೆ ಮತ್ತು ತೀವ್ರವಾದ ವಾಹನ

ಸಂಚಾರದೊಳಗೆ ಶ್ರಮಿಸಬೇಕಾದ ಅನಾನುಕೂಲಗಳು ದೂರವಾಗುತ್ತವೆ. ನಿಗದಿತ ಸಮಯದೊಳಗೆ ಜಲಮಂಡಲಿಗೆ ಹಣ ಪಾವತಿಯಾಗಿ ಯಾವ ತೊಂದರೆಗಳು ಅಥವಾ ಸಮಸ್ಯೆಗಳಿಗೆ ಅವಕಾಶವಿರುವುದಿಲ್ಲ. ಜಲಮಂಡಲಿಗೆ ಬಿಲ್ಲನ್ನು ಪಾವತಿಸಲು ವ್ಯಯಿಸುವ ಸಮಯ ಉಳಿತಾಯವಾಗಿ ಅದನ್ನು ತಮ್ಮ ಇನ್ನಿತರ ಅತ್ಯಗತ್ಯ ಕೆಲಸಗಳಿಗೆ ಉಪಯೋಗಿಸಿಕೊಂಡು ಬಳಕೆದಾರರು ನೆಮ್ಮದಿಯಿಂದ ಉಸಿರಾಡಬಹುದು. ಈ ಸೌಲಭ್ಯ ಮತ್ತು ನೆಮ್ಮದಿಯನ್ನು ಹೊಂದಲು ಬಳಕೆದಾರರು ಒಂದು ಬಿಡಿಗಾಸನ್ನು ಹೆಚ್ಚಾಗಿ ನೀಡಬೇಕಿರುವುದಿಲ್ಲ; ಬದಲಾಗಿ ಈ ವ್ಯವಸ್ಥೆಯ ಸಂಪೂರ್ಣ ಜವಾಬ್ದಾರಿಯನ್ನು ಮತ್ತು ವೆಚ್ಚವನ್ನು ಜಲಮಂಡಲಿಯು ಭರಿಸುತ್ತದೆ. ಆದರೆ, ಬಳಕೆದಾರರು ಮಾಡಬೇಕಿರುವುದು ಇಷ್ಟೇ: ಜಲಮಂಡಲಿಯು ಒದಗಿಸುವ "ವಿದ್ಯುನ್ಮಾನ ಪಾವತಿ ವ್ಯವಸ್ಥೆ"ಯ ಅರ್ಜಿಯ ನಮೂನೆಯಲ್ಲಿ ಕೇಳಿರುವ ಮಾಹಿತಿಗಳನ್ನು ಸಂಪೂರ್ಣವಾಗಿ ಒದಗಿಸಿ, ತಮ್ಮ ಸಹಿ ಮತ್ತು ನೀರಿನ ಬಿಲ್ಲುಗಳ ಮೊತ್ತವನ್ನು ತಮ್ಮ ಬ್ಯಾಂಕ್ ಖಾತೆಯ ಮೂಲಕ ಪಾವತಿ ಮಾಡಲಿಚ್ಛಿಸುವವರ ಸಹಿ ಹಾಗೂ ಸಂಬಂಧಿಸಿದ ಬ್ಯಾಂಕ್‌ನ ವ್ಯವಸ್ಥಾಪಕರ ಸಹಿಯೊಂದಿಗೆ ಅರ್ಜಿಯನ್ನು ಸಂಬಂಧಿಸಿದ ಜಲಮಂಡಲಿಯ ಕಛೇರಿಗೆ ಹಿಂತಿರುಗಿಸುವುದು ಮಾತ್ರ.

ಈ ವ್ಯವಸ್ಥೆಯು ನವೀನವಾದುದರಿಂದ ಹಾಗೂ ಬಳಕೆದಾರರು ಜಲಮಂಡಲಿಯ ಕಛೇರಿಗೆ ಹೋಗಬೇಕಾದ ಪ್ರಮೇಯವೇ ಉದ್ಭವಿಸದಿರುವುದರಿಂದ ಮತ್ತು ಈ ವ್ಯವಹಾರದಲ್ಲಿ ಕಾಗದದ ಅವಶ್ಯಕತೆಯೇ ಇಲ್ಲದಿರುವುದರಿಂದ ಬಳಕೆದಾರರ ಮನಸ್ಸಿನಲ್ಲಿ ಹಲವಾರು ಸಂಶಯಗಳು ಹೆಡೆಯಾಡುವುದು ಸ್ವಾಭಾವಿಕವಾಗಿರುತ್ತದೆ. ಬಳಕೆದಾರರು ಸಂಶಯಿಸಬಹುದಾದ ವಿಷಯಗಳು ಮತ್ತು ಅವುಗಳಿಗೆ ಜಲಮಂಡಲಿಯು ತನ್ನ ಸ್ಪಷ್ಟೀಕರಣಗಳನ್ನು ಈ ಮುಂದಿನಂತೆ ಸಲ್ಲಿಸುತ್ತಿದೆ.

೧. ಇನ್ನು ಮುಂದೆ ನಮಗೆ ಪ್ರತಿ ತಿಂಗಳು ಜಲಪೂರೈಕೆ ವೆಚ್ಚದ ಬಿಲ್ಲುಗಳು ಬರುವುದಿಲ್ಲವೇ?

ನೀರಿನ ಬಿಲ್ಲುಗಳನ್ನು ಎಂದಿನಂತೆಯೇ ಪ್ರತಿ ತಿಂಗಳು ನೀಡಲಾಗುವುದು. ನಿಗದಿತ ದಿನದಂದು ಜಲಮಂಡಲಿಯ ವಾಚನಕಾರರು ಬಳಕೆದಾರರ ಜಲಮಾಪಕಗಳನ್ನು ವಾಚನ ಮಾಡಿ, ಗಣಕೀಕೃತ ಬಿಲ್ಲುಗಳನ್ನು ನೀಡುವರು. ಆದರೆ, ಬಳಕೆದಾರರು ಈ ಬಿಲ್ಲುಗಳನ್ನು ಪಾವತಿ ಮಾಡಬೇಕಿರುವುದಿಲ್ಲ. ಬಳಕೆಯಾಗಿರುವ ನೀರಿನ ಪ್ರಮಾಣ ಮತ್ತು ಬಿಲ್ಲಿನ ಮೊತ್ತದ ಬಗ್ಗೆ ಬಳಕೆದಾರರ ಗಮನಕ್ಕೆ ತರಲು ಮಾತ್ರ ಈ ಬಿಲ್ಲುಗಳನ್ನು ನೀಡಲಾಗುತ್ತದೆ. ಜೊತೆಗೆ, "ಈ ಬಿಲ್ಲುಗಳು ಪಾವತಿ ಮಾಡಲು ಅಲ್ಲ" ಎಂಬ ಸಂದೇಶವು ಬಿಲ್ಲುಗಳ ಮೇಲೆ ಮುದ್ರಿತವಾಗಿರುತ್ತದೆ.

೨. ನಮ್ಮ ಖಾತೆಯಿಂದ ನೀರಿನ ಬಿಲ್ಲಿನ ಮೊತ್ತವನ್ನು ಪಡೆದುಕೊಳ್ಳುವ ಜಲಮಂಡಲಿಯು ಇದಕ್ಕೆ ರಶೀತಿಯನ್ನಾಗಲೀ ಅಥವಾ ಬೇರ್ಯಾವುದಾದರು ಅಂಗೀಕಾರವನ್ನು ನೀಡುವುದೇ?

ಇಲ್ಲ, ಇದಕ್ಕಾಗಿ ಬೇರೆ ಯಾವುದೇ ರಶೀತಿ ಅಥವಾ ಅಂಗೀಕಾರವನ್ನು ನೀಡಲಾಗುವುದಿಲ್ಲ. ಆದರೆ, ಜಲಮಂಡಲಿಗೆ ಪಾವತಿ ಮಾಡಿದ ನೀರಿನ ಬಿಲ್ಲಿನ ಮೊತ್ತವನ್ನು ಪಡೆದುಕೊಂಡಿರುವುದಕ್ಕೆ ಸಾಕ್ಷಿಯಾಗಿ ಆಯಾ ಬಳಕೆದಾರರ ಬ್ಯಾಂಕ್‌ನ ಪಾಸ್ ಬುಕ್‌ಗಳಲ್ಲಿ ಈ ವ್ಯವಹಾರವು ನಮೂದಾಗಿರುತ್ತದೆ. ತಾನು ಪಡೆದುಕೊಂಡ ನೀರಿನ ಬಿಲ್ಲಿನ ಮೊತ್ತಕ್ಕೆ ಜಲಮಂಡಲಿಯು ಜವಾಬ್ದಾರನಾಗಿದ್ದು ಮತ್ತು ಅದಕ್ಕೆ ಬದ್ಧವಾಗಿರುತ್ತದೆ.

೩. ಈ ವ್ಯವಸ್ಥೆಯಲ್ಲಿ ನೀರಿನ ಬಿಲ್ಲಿನ ಮೊತ್ತವನ್ನು ಪಡೆದುಕೊಳ್ಳಲು ಜಲಮಂಡಲಿಯು ಜಲಮಾಪಕವನ್ನು ವಾಚನ ಮಾಡಿದ ಕೂಡಲೇ ಬ್ಯಾಂಕಿಗೆ ಬಿಲ್ಲನ್ನು ಕಳುಹಿಸುವುದೇ?

ಇಲ್ಲ, ಆಯಾ ಜಲಪೂರೈಕೆ ಸಂಪರ್ಕಗಳಿಗೆ ಬಿಲ್ಲನ್ನು ಪಾವತಿ ಮಾಡಲು ನೀಡಲಾಗಿರುವ ಗಡುವಿನ ದಿನಕ್ಕೆ ಒಂದು ವಾರ ಮುಂಚಿತವಾಗಿ ಜಲಮಂಡಲಿಯು ವಿದ್ಯುನ್ಮಾನದ ಮೂಲಕ ಆಯಾ ಬ್ಯಾಂಕ್‌ಗಳಿಗೆ ಬಿಲ್ಲಿನ ಮೊತ್ತದ ಬಗ್ಗೆ ಮಾಹಿತಿಯನ್ನು ನೀಡುವುದು.

೪. ನಾವು ನಮ್ಮ ಹಲವಾರು ವ್ಯವಹಾರಗಳಿಗೆ ಪಾವತಿ ಮಾಡಲು ವಿವಿಧ ದಿನಾಂಕಗಳ ಚೆಕ್‌ಗಳನ್ನು ಬೇರೆಯವರಿಗೆ ನೀಡಿರುತ್ತೇವೆ. ಈ ಮಧ್ಯೆ ಜಲಮಂಡಲಿಯು ತನ್ನ ನೀರಿನ ಬಿಲ್ಲನ್ನು ಮಧ್ಯೆ ತೂರಿಸಿ ಹಣ ಪಡೆದುಕೊಂಡು ಬೇರೆ ಚೆಕ್‌ಗಳಿಗೆ ಹಣವಿಲ್ಲದಂತಾಗಿ ನಮಗೆ ಅನಾನುಕೂಲ ಹಾಗೂ ಅಪಮಾನಗಳಿಗೆ ಅವಕಾಶಗಳಿಗೆ ಕಾರಣವಾಗುವುದಿಲ್ಲವೇ?

ಬಳಕೆದಾರರು ತಮ್ಮ ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರ ವಹಿಸಿದಲ್ಲಿ ಇಂತಹ ಘಟನೆಗಳಿಗೆ ಅವಕಾಶವಿರುವುದಿಲ್ಲ. ಎಲ್ಲಕ್ಕೂ ಮೊದಲಾಗಿ ಜಲಮಂಡಲಿಯು ಬಿಲ್ಲಿನ ಮೊತ್ತವನ್ನು ಕೂಡಲೇ ಕಟಾವು ಮಾಡುವಂತೆ ಸಂಬಂಧಿಸಿದ ಬ್ಯಾಂಕ್‌ಗೆ ಸೂಚಿಸುವುದಿಲ್ಲ. ಬಳಕೆದಾರರಿಗೆ ಬಿಲ್ಲಿನ ಮೊತ್ತವನ್ನು ಪಾವತಿ ಮಾಡಲು ನೀಡಲಾಗಿರುವ ಗಡುವಿನ ದಿನದವರೆಗೂ ಕಾದು ಅಂತಿಮ ದಿನದಂದೇ ಮೊತ್ತವನ್ನು ಸ್ವೀಕರಿಸುವ ಕ್ರಮ ಕೈಗೊಳ್ಳುತ್ತದೆ. ಈ ಅವಧಿಯ ಮಧ್ಯೆ ಬಳಕೆದಾರರು ನಡೆಸಿರುವ ವ್ಯವಹಾರಗಳಿಗೆ ಜಲಮಂಡಲಿಯು ಅಡಚಣೆ ಮಾಡುವುದಿಲ್ಲ. ಆದರೆ, ಬಳಕೆದಾರರು ತಮ್ಮ ನೀರಿನ ಬಿಲ್ಲಿನ ಪಾವತಿಗೆ ನೀಡಿರುವ ಗಡುವಿನ

ಅಂತಿಮ ದಿನದ ಮುನ್ನವೇ ತಮ್ಮ ಖಾತೆಯಲ್ಲಿ ನೀರಿನ ಬಿಲ್ಲಿನ ಮೊತ್ತಕ್ಕಿಂತಲೂ ಹೆಚ್ಚು ಹಣ ಉಳಿದಿರುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕಿರುವುದು ಅವರ ಜವಾಬ್ದಾರಿಯಾಗಿರುತ್ತದೆ.

೫. ಕಾರಣಾಂತರಗಳಿಂದ ನಾವು ಯಾವುದಾದರೊಂದು ತಿಂಗಳು ಜಲಮಾಪಕದ ವಾಚನದ ದಿನದಂದು ಮನೆಯಲ್ಲಿರುವುದಿಲ್ಲ. ನೀರಿನ ಬಳಕೆಯ ಪ್ರಮಾಣ ದೊರೆಯದೇ ಆ ತಿಂಗಳಿನ ಬಿಲ್ಲನ್ನು ಹೇಗೆ ನಿಷ್ಕರ್ಷಿಸುತ್ತೀರಿ ಮತ್ತು ಬಿಲ್ಲಿನ ಹಣವನ್ನು ಹೇಗೆ ಪಡೆದುಕೊಳ್ಳುತ್ತೀರಿ?

ಮಾಪಕ ವಾಚನ ಮಾಡಲಾಗದ ತಿಂಗಳಿನಲ್ಲಿ ಆಯಾ ಸಂಪರ್ಕಗಳಿಗೆ ವಿಧಿಸಬಹುದಾದ ಕನಿಷ್ಠ ಮೊತ್ತದ ಬಿಲ್ಲನ್ನು ಮಾತ್ರ ವಿತರಿಸಿ, ಆ ಮೊತ್ತವನ್ನು ಮಾತ್ರ ಬಳಕೆದಾರರ ಬ್ಯಾಂಕ್ ಖಾತೆಯಿಂದ ಪಡೆದುಕೊಳ್ಳಲಾಗುವುದು.

೬. ಮಾಪಕ ವಾಚನ ಮಾಡದ ತಿಂಗಳಿನ ಮುಂದಿನ ತಿಂಗಳು ಜಲಮಾಪಕ ವಾಚನ ಮಾಡಿದಾಗ ಎರಡು ತಿಂಗಳಿನ ನೀರಿನ ಬಳಕೆಯ ಪ್ರಮಾಣ ಒಟ್ಟಾಗಿದ್ದು, ಈ ಪ್ರಮಾಣಕ್ಕೆ ಒಂದೇ ತಿಂಗಳಿನ ಬಳಕೆಯಂತೆ ಬಿಲ್ಲನ್ನು ನೀಡಿದಲ್ಲಿ ಹೆಚ್ಚು ಬಿಲ್ಲಿನ ಮೊತ್ತ ಬಂದು ನಮಗೆ ಅನ್ಯಾಯವಾಗುವುದಿಲ್ಲವೇ?

ಇಲ್ಲ, ಇಂತಹ ಸಂದರ್ಭಗಳಲ್ಲಿ ದಾಖಲಾಗುವ ಒಟ್ಟು ನೀರಿನ ಬಳಕೆಯ ಪ್ರಮಾಣವನ್ನು ಎರಡು ತಿಂಗಳುಗಳಿಗೆ ವಿಭಜಿಸಿ, ಎರಡು ತಿಂಗಳುಗಳ ಬಿಲ್ಲಿನ ಮೊತ್ತವನ್ನು ಪ್ರತ್ಯೇಕವಾಗಿ ನಿಷ್ಕರ್ಷಿಸಿ, ಒಟ್ಟು ಮೊತ್ತವನ್ನು ಲೆಕ್ಕ ಹಾಕಲಾಗುವುದು. ಇದರಲ್ಲಿ ಮಾಪಕ ವಾಚನ ಮಾಡದ ತಿಂಗಳಿನಲ್ಲಿ ಕನಿಷ್ಠ ಮೊತ್ತವನ್ನು ಜಲಮಂಡಲಿಯು ಈಗಾಗಲೇ ಪಡೆದುಕೊಂಡಿದ್ದರೆ ಆ ಮೊತ್ತವನ್ನು ಕಡಿತಗೊಳಿಸಿ ಪರಿಷ್ಕೃತ ಮೊತ್ತದ ಬಿಲ್ಲನ್ನು ನೀಡಲಾಗುವುದು. ಹೇಗಿದ್ದರೂ ಬಿಲ್ಲನ್ನು ಬಳಕೆದಾರರಿಗೆ ನೀಡುವುದರಿಂದ ಈ ವಿಷಯವು ಅವರ ಗಮನಕ್ಕೆ ಬಂದೇಬರುತ್ತದೆ.

೭. ಯಾವುದಾದರೊಂದು ಸಂದರ್ಭದಲ್ಲಿ ಹಲವಾರು ತಿಂಗಳುಗಳು ನಾವು ನಗರದಲ್ಲಿಲ್ಲದಾಗ ಹೇಗೆ ಬಿಲ್ಲನ್ನು ನೀಡುತ್ತೀರಿ ಮತ್ತು ಎಷ್ಟು ಹಣವನ್ನು ಪಡೆಯುತ್ತೀರಿ?

ಪ್ರಥಮ ಹಂತದಲ್ಲಿ ಮಾಪಕ ವಾಚನ ಮಾಡದಿರುವ ತಿಂಗಳುಗಳಿಗೆ ಆಯಾ ಸಂಪರ್ಕಗಳಿಗೆ ವಿಧಿಸಬಹುದಾದ ಕನಿಷ್ಠ ಮೊತ್ತದ ಬಿಲ್ಲಿನ ಮೊತ್ತವನ್ನು ಮಾತ್ರ ಪಡೆಯಲಾಗುವುದು. ಆದರೆ, ಈ ಪದ್ಧತಿ ಮೂರು ತಿಂಗಳು ಮಾತ್ರ ಆಚರಣೆಯಲ್ಲಿರುತ್ತದೆ. ನಂತರ, ನೀರು ವ್ಯರ್ಥವಾಗುವ ಮತ್ತು ಜಲಮಾಪಕಗಳು ಕಳುವಾಗುವ ಸಂದರ್ಭಗಳನ್ನು ತಪ್ಪಿಸಲು ಇಂತಹ ಸಂಪರ್ಕಗಳನ್ನು ಕಡಿದು ಹಾಕಿ ಮಾಪಕವನ್ನು ಕಛೇರಿಯ ವಶದಲ್ಲಿಟ್ಟುಕೊಳ್ಳಲಾಗುವುದು. ಬಳಕೆದಾರರಿಗೆ ಜಲಪೂರೈಕೆ ಸಂಪರ್ಕ ಬೇಕಾದಾಗ ಕಛೇರಿಗೆ ಅರ್ಜಿಯನ್ನು ಸಲ್ಲಿಸಿ, ಮರುಸಂಪರ್ಕದ ಶುಲ್ಕವನ್ನು ಪಾವತಿ ಮಾಡಿ ಮರುಸಂಪರ್ಕವನ್ನು ಪಡೆದುಕೊಳ್ಳಬಹುದು. ಆದರೆ, ಸಂಪರ್ಕವನ್ನು ರಸ್ತೆಯಲ್ಲಿ ಕಡಿದು ಹಾಕಿದ್ದಲ್ಲಿ ಬಳಕೆದಾರರು ಜಲಮಂಡಲಿಯ ಸನ್ನದು ಹೊಂದಿರುವ ಗುತ್ತಿಗೆದಾರರ ಸಹಾಯದಿಂದ ಕಛೇರಿಗೆ ಅರ್ಜಿ ಸಲ್ಲಿಸಿ ಮರುಸಂಪರ್ಕ ಪಡೆದುಕೊಳ್ಳಬಹುದಾಗಿದೆ.

೮. ಯಾವುದಾದರೊಂದು ತಿಂಗಳು ನೀರಿನ ಬಿಲ್ಲು ನಮ್ಮ ನಿರೀಕ್ಷೆಗಿಂತ ಹೆಚ್ಚಾಗಿ ಬಂದು, ನಾವು ಈ ಬಗ್ಗೆ ಪ್ರತಿಕ್ರಿಯಿಸಲು ಅವಕಾಶ ನೀಡದೇ ಜಲಮಂಡಲಿಯು ನಮ್ಮ ಬ್ಯಾಂಕ್ ಖಾತೆಯಿಂದ ಹಣವನ್ನು ಪಡೆದುಕೊಂಡಲ್ಲಿ ನಮಗೆ ಇರಿಸು ಮುರಿಸಾಗುವುದಿಲ್ಲವೇ? ಹಾಗೂ ಇದು ನಮ್ಮ ವೈಯುಕ್ತಿಕ ಸ್ವಾತಂತ್ರ್ಯದ ಅತಿಕ್ರಮಣವಾದಂತಲ್ಲವೇ?

ಜಲಮಂಡಲಿಯು ಯಾವುದೇ ಸಂದರ್ಭಗಳಲ್ಲಿ ಬಳಕೆದಾರರ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಮಾಡುವುದಿಲ್ಲ. ಹೇಗಿದ್ದರೂ ಬಳಕೆದಾರರ ಬಿಲ್ಲಿನ ಮೊತ್ತವನ್ನು ಜಲಮಂಡಲಿಯು ಸ್ವೀಕರಿಸಲು ಮಾಪಕ ವಾಚನದ ದಿನಾಂಕದಿಂದ ಹದಿನೈದು ದಿನಗಳ ಕಾಲಾವಕಾಶವಿರುತ್ತದೆ. ಅದರಲ್ಲಿಯೂ ಬಳಕೆದಾರರ ಬಿಲ್ಲಿನ ಹಣದ ಕಟಾವಿಗಾಗಿ ಜಲಮಂಡಲಿಯು ಬ್ಯಾಂಕಿಗೆ ಮಾಹಿತಿ ನೀಡುವುದು ಗಡುವಿನ ದಿನಾಂಕಕ್ಕೆ ಒಂದು ವಾರ ಮುಂಚಿತವಾದ್ದರಿಂದ, ಈ ಅವಧಿಯೊಳಗೆ ಬಳಕೆದಾರರು ತಮ್ಮ ಆಕ್ಷೇಪಣೆಯನ್ನು ಕಛೇರಿಗೆ ಸಲ್ಲಿಸಬಹುದು. ಸಮಸ್ಯೆ ಇತ್ಯರ್ಥವಾಗುವವರೆಗೂ ಅಂತಹ ಆಕ್ಷೇಪಿತ ಬಿಲ್ಲಿನ ಮೊತ್ತವನ್ನು ಕಟಾವು ಮಾಡುವಂತೆ ಬ್ಯಾಂಕಿಗೆ ಸೂಚನೆಯನ್ನು ನೀಡುವುದಿಲ್ಲ.

ಆದರೆ, ಬಳಕೆದಾರರು ವಿವಾದಾಸ್ಪದ ಬಿಲ್ಲಿನ ಮೊತ್ತವನ್ನು ಪ್ರತಿಭಟನೆಯ ಮೂಲಕ ಮೊದಲು ಪಾವತಿ ಮಾಡಿದಲ್ಲಿ, ತಡವಾಗಿ ಪಾವತಿ ಮಾಡುವಾಗ ವಿಧಿಸಲಾಗುವ ಬಡ್ಡಿಯನ್ನು ನಿವಾರಿಸಿಕೊಳ್ಳಬಹುದು. ನಂತರ, ಬಿಲ್ಲಿನ ಬಗ್ಗೆ ಬಳಕೆದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಕಛೇರಿಯು ಅಭ್ಯಸಿಸಿ, ಸಂಬಂಧಿಸಿದ ಪ್ರಾಧಿಕಾರದ ಮುಂದೆ ವಿಷಯವನ್ನು ಮಂಡಿಸಿ, ಬಳಕೆದಾರರ ಆಕ್ಷೇಪಣೆಯು ಸಹ್ಯವಾಗಿದ್ದಲ್ಲಿ ಸೂಕ್ತ ರಿಯಾಯಿತಿಯನ್ನು ನೀಡಿ, ವ್ಯತ್ಯಾಸವಾಗುವ ಹಣವನ್ನು ಮುಂದಿನ ತಿಂಗಳುಗಳ ನೀರಿನ ಬಿಲ್ಲುಗಳಿಗೆ ಸರಿಹೊಂದಿಸಲಾಗುವುದು.

೯. ಭವಿಷ್ಯದಲ್ಲಿ ಜಲಮಂಡಲಿಯು ಯಾವುದಾದರೂ ಲೆಖ್ಖಪತ್ರ ತಪಾಸಣೆಯಿಂದ ಬರಬಹುದಾದ ಅಥವಾ ಬೇರ್‍ಯಾವ ರೀತಿಯಿಂದಾದರೂ ಉದ್ಭವಿಸಬಹುದಾದ ಬಾಕಿ ಹಣವನ್ನು ನಮ್ಮ ಗಮನಕ್ಕೆ ತರದೆಯೇ ನಮ್ಮ ಬ್ಯಾಂಕ್ ಖಾತೆಯಿಂದ ಪಡೆದುಕೊಂಡರೆ ನಮಗೆ ಅನ್ಯಾಯವಾದಂತಾಗುವುದಿಲ್ಲವೇ ಮತ್ತು ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವುದಿಲ್ಲವೇ?

ಈಗಾಗಲೇ ತಿಳಿಸಿರುವಂತೆ ಜಲಮಂಡಲಿಯು ಬಳಕೆದಾರರ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವಂತಹ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಬಳಕೆದಾರರ ಸಂಪೂರ್ಣ ವಿಶ್ವಾಸವನ್ನು ಪಡೆದುಕೊಂಡೇ ಜಲಮಂಡಲಿಯು ಮುಂದಿನ ಹೆಜ್ಜೆಯನ್ನಿಡುವುದು. ಯಾವುದಾದರೂ ಲೆಖ್ಖಪತ್ರ ತಪಾಸಣೆಯಿಂದ ಬರಬಹುದಾದ ಅಥವಾ ಬೇರ್‍ಯಾವ ರೀತಿಯಿಂದಾದರೂ ಉದ್ಭವಿಸಬಹುದಾದ ಬಾಕಿ ಹಣದ ವಿಷಯವನ್ನು ಆಯಾ ಬಳಕೆದಾರರ ಗಮನಕ್ಕೆ ತಂದು, ಅವರ ಮನಗಾಣಿಸಿ, ಆ ಮೊತ್ತವನ್ನು ಮುಂದಿನ ತಿಂಗಳುಗಳ ಬಿಲ್ಲುಗಳಲ್ಲಿ ಕೇಳಲಾಗುವುದು. ಬಳಕೆದಾರರು ಬೇಡಿದಲ್ಲಿ, ಅಂತಹ ಮೊತ್ತದ ಪಾವತಿಗಾಗಿ ಸೂಕ್ತ ಸಂಖ್ಯೆಗಳ ಕಂತುಗಳ ಸೌಲಭ್ಯವನ್ನು ನೀಡಲಾಗುವುದು.

೧೦. ಈ ಎಲ್ಲಾ ವ್ಯವಹಾರಗಳು ವಿದ್ಯುನ್ಮಾನ ಮಾಧ್ಯಮದ ಮೂಲಕ ಹಾಗೂ ಗಣಕ ಯಂತ್ರದ ಮೂಲಕ ನಡೆಯುವುದರಿಂದ, ಇದರಲ್ಲಿ ಜಲಮಂಡಲಿಯ ಯಾವ್ಯೊಬ್ಬ ಸಿಬ್ಬಂದಿಯಿಂದ ಉದ್ದೇಶಪೂರ್ವಕವಾದ ಹಾಗೂ ಯಾವುದಾದರೂ ಕುಚೇಷ್ಟೆಗಳಿಗೆ ಅವಕಾಶವಿದೆಯೇ?

ಇಲ್ಲ, ಇಂತಹ ಯಾವುದೇ ಅಸಂತುಷ್ಟ ಘಟನೆಗಳಿಗೆ ಅವಕಾಶವಿರದಂತೆ ಜಲಮಂಡಲಿಯು ಈ ವ್ಯವಸ್ಥೆಯನ್ನು ರೂಪಿಸಿರುತ್ತದೆ. ಪ್ರತಿಯೊಂದು ವ್ಯವಹಾರವು ಬಳಕೆದಾರರ ಗಮನಕ್ಕೆ ಬರಲಿರುವುದರಿಂದ ಈ ಬಗ್ಗೆ ಬಳಕೆದಾರರು ಎಳ್ಳಷ್ಟೂ ಸಂಶಯ ವ್ಯಕ್ತಪಡಿಸಬೇಕಿರುವುದಿಲ್ಲ.

೧೧. "ವಿದ್ಯುನ್ಮಾನ ತೀರುವಳಿ ವ್ಯವಸ್ಥೆ"ಯಿಂದ ನಮ್ಮ ನೀರಿನ ಬಿಲ್ಲುಗಳ ಪಾವತಿಯಾಗುವುದರಿಂದ, ನಮ್ಮ ಬ್ಯಾಂಕ್ ಖಾತೆಗಳಲ್ಲಿ ಹೊರಗಿನವರು ಕೈಯಾಡಿಸಿ, ನಮ್ಮ ಹಣವನ್ನು ಲಪಟಾಯಿಸುವ ಸಾಧ್ಯತೆಗಳಿವೆಯೇ?

ಈ ವಿಷಯದಲ್ಲಿ ಬಳಕೆದಾರರು ಯಾವುದೇ ಅನುಮಾನವನ್ನು ಹೊಂದಬೇಕಿರುವುದಿಲ್ಲ. ಸಂಪೂರ್ಣ ವ್ಯವಹಾರವು ವಿದ್ಯುನ್ಮಾನದ ಮತ್ತು ಗಣಕ ಯಂತ್ರದ ಮೂಲಕ ನಡೆಯುವುದರಿಂದಲೂ ಮತ್ತು ಇದು ಅತ್ಯಂತ ರಹಸ್ಯವಾಗಿ ನಡೆಯುವುದರಿಂದಲೂ ಹೊರಗಿನವರು ಬಳಕೆದಾರರ ಬ್ಯಾಂಕ್ ಖಾತೆಯಲ್ಲಿ ಕೈಯಾಡಿಸುವುದು ಸಾಧ್ಯವೇ ಇರುವುದಿಲ್ಲ. ಹಣದ ವ್ಯವಹಾರವು ನಗದು ರೂಪದಲ್ಲಿಲ್ಲದೇ ಕೇವಲ ಹಣದ ಮೊತ್ತದ ವರ್ಗಾವಣೆಯಿಂದ ನಡೆಯುವುದರಿಂದಲೂ ಮತ್ತು ಇದು ಬಳಕೆದಾರರ ಬ್ಯಾಂಕ್ ಮತ್ತು ಜಲಮಂಡಲಿಯ ಬ್ಯಾಂಕ್‌ಗಳ ನಡುವೆ ನಡೆಯುವುದರಿಂದಲೂ ಯಾವ ಅನುಮಾನಗಳಿಗೆ ಅವಕಾಶವಿರುವುದಿಲ್ಲ. ಎಲ್ಲಕ್ಕೂ ಮುಖ್ಯವಾಗಿ ಈ ವ್ಯವಹಾರವು "ಭಾರತೀಯ ರಿಸರ್ವ್ ಬ್ಯಾಂಕ್"ನ ಮೂಗಿನಡಿಯಲ್ಲಿಯೇ ನಡೆಯುವುದರಿಂದ ವ್ಯವಹಾರದ ದುರುಪಯೋಗಕ್ಕೆ ಲವಲೇಶವೂ ಅವಕಾಶವಿರುವುದಿಲ್ಲ.

೧೨. ಒಂದು ವೇಳೆ "ವಿದ್ಯುನ್ಮಾನ ಪಾವತಿ ವ್ಯವಸ್ಥೆ"ಯ ಮೂಲಕ ಬಿಲ್ಲುಗಳನ್ನು ಪಾವತಿ ಮಾಡುವ ಕ್ರಮಗಳು ನಮಗೆ ಒಪ್ಪಿಗೆಯಾಗದಿದ್ದಲ್ಲಿ, ಈ ವ್ಯವಸ್ಥೆಯಿಂದ ಹಿಂತೆಗೆದುಕೊಂಡು ಹಿಂದಿನಂತೆಯೇ ನಾವೇ ಜಲಮಂಡಲಿಯ ನಗದು ಗಲ್ಲೆಗಳ ಮೂಲಕ ಪಾವತಿ ಮಾಡುವ ಕ್ರಮಗಳಿಗೆ ಅವಕಾಶವಿದೆಯೇ?

ಖಂಡಿತವಾಗಿ ನಿಮಗೆ "ವಿದ್ಯುನ್ಮಾನ ತೀರುವಳಿ ವ್ಯವಸ್ಥೆ"ಯ ಮೂಲಕ ಬಿಲ್ಲುಗಳನ್ನು ಪಾವತಿ ಮಾಡುವ ಕ್ರಮವನ್ನು ಹಿಂತೆಗೆದುಕೊಳ್ಳುವ ಅವಕಾಶವಿರುತ್ತವೆ. ನೀವು ಯಾವುದೇ ವ್ಯವಸ್ಥೆಯ ಮೂಲಕ ಜಲಮಂಡಲಿಗೆ ಹಣ ಪಾವತಿ ಮಾಡಲು ಸ್ವಾತಂತ್ರ್ಯವುಳ್ಳವರಾಗಿರುತ್ತೀರಿ. ಈ ನೂತನ ವ್ಯವಸ್ಥೆಯಿಂದಾಗಿ ಬಳಕೆದಾರರಿಗೆ ತಮ್ಮ ಅಮೂಲ್ಯ ಸಮಯವನ್ನು ಉಳಿತಾಯಗೊಳಿಸಲು ಸಹಕಾರಿಯಾಗುವುದೆಂಬ ಭರವಸೆಯೊಡನೆ ಜಲಮಂಡಲಿಯು ಇದನ್ನು ಜಾರಿಗೆ ತರುತ್ತಿದ್ದು, ಇದಕ್ಕೊಳಪಡುವಂತೆ ಜಲಮಂಡಲಿಯು ಯಾರನ್ನೂ ಬಲಾತ್ಕರಿಸುವುದಿಲ್ಲ. ಯಾರೊಬ್ಬ ಬಳಕೆದಾರರಿಗೆ ಈ ವ್ಯವಸ್ಥೆಯು ತೃಪ್ತಿಯಾಗದಿದ್ದಲ್ಲಿ, ಅವರು ಸಂಬಂಧಿಸಿದ ಕಛೇರಿಗೆ ಆಯಾ ಕಾರಣಗಳನ್ನು ನಮೂದಿಸಿ ಕಛೇರಿಗೆ ಅರ್ಜಿಯನ್ನು ಸಲ್ಲಿಸಿ, ಈ ಸೌಲಭ್ಯದಿಂದ ಹಿಂದಕ್ಕೆ ಬಂದು ಮುಂಚಿನಂತೆಯೇ ಜಲಮಂಡಲಿಯ ನಗದು ಗಲ್ಲೆಗಳಲ್ಲಿ ನೀರಿನ ಬಿಲ್ಲುಗಳನ್ನು ಪಾವತಿಸಬಹುದು.

ಆದರೆ, ಅಂತಹ ಸಂದರ್ಭಗಳು ಉದ್ಭವಿಸುವುದಿಲ್ಲವೆಂಬ ಭರವಸೆಯನ್ನು ಜಲಮಂಡಲಿಯು ವ್ಯಕ್ತಪಡಿಸುತ್ತದೆ. ಸರಳವಾದ, ಸುಲಲಿತವಾದ, ಯಾವ ಜಂಜಾಟವಿಲ್ಲದ, ಅತ್ಯಂತ ವಿಶ್ವಾಸಪೂರ್ವಕವಾದ "ವಿದ್ಯುನ್ಮಾನ ತೀರುವಳಿ ವ್ಯವಸ್ಥೆ"ಯ ಮೂಲಕ ಬಿಲ್ಲುಗಳನ್ನು ಪಾವತಿ ಮಾಡಲು ಒಮ್ಮೆ ಪ್ರಾರಂಭಿಸಿದ ಬಳಕೆದಾರ ಈ ವ್ಯವಸ್ಥೆಯಿಂದ ಹಿಂತೆಗೆಯುವುದಿಲ್ಲವೆಂಬ ನಂಬಿಕೆ ಬೆಂಗಳೂರು ಜಲಮಂಡಲಿಗೆ ಇರುತ್ತದೆ.

ಒಮ್ಮೆ ಯೋಚಿಸಿ, ನವೀನವಾದ "ವಿದ್ಯುನ್ಮಾನ ತೀರುವಳಿ ವ್ಯವಸ್ಥೆ"ಯ ಮೂಲಕ ಬಿಲ್ಲುಗಳನ್ನು ಪಾವತಿ ಮಾಡಲು ನಿಮ್ಮ ಸಮ್ಮತಿಯನ್ನು ಸೂಚಿಸಿ; ನೀರಿನ ಬಿಲ್ಲಿನ ಹಣವನ್ನು ಪಾವತಿ ಮಾಡಲು ನಿಮ್ಮ ಮನೆಯಿಂದ ಜಲಮಂಡಲಿಯ ನಗದು ಗಲ್ಲೆಯವರೆವಿಗೂ ನಡೆದು ಬಂದು, ಉದ್ದವಾದ ಸರತಿಯ ಸಾಲಿನಲ್ಲಿ ನಿಂತು, ಹಣ ಪಾವತಿ ಮಾಡಿ ಹಿಂತಿರುಗಿ ಹೋಗುವ ಜಂಜಾಟವನ್ನು ಮತ್ತೊಮ್ಮೆ ಯೋಚಿಸಿ. ಇದಕ್ಕಾಗಿ ತಾವು ವ್ಯಯಿಸಬೇಕಾದ ತಮ್ಮ ಅಮೂಲ್ಯವಾದ ಸಮಯದ ಲೆಖ್ಖವನ್ನು ಹಾಕಿ ನೋಡಿ, ಬೆಂಗಳೂರು ಮಹಾನಗರದ ಜನದಟ್ಟಣೆ ಮತ್ತು ಅಗಾಧವಾದ ವಾಹನ ಸಂಚಾರದೊಳಗೆ ಓಡಾಡಬೇಕಾದ ಶ್ರಮವನ್ನು ಊಹಿಸಿಕೊಳ್ಳಿ. ನಿಗದಿತ ಸಮಯದೊಳಗೆ ಜಲಮಂಡಲಿಯ ನಗದುಗಲ್ಲೆಯನ್ನು ತಲುಪಲಾಗದೇ ಹಣ ಪಾವತಿಯಾಗದಿದ್ದಲ್ಲಿ ನಿಮಗಾಗುವ ನಿರಾಸೆಯನ್ನು ನೆನಪಿಸಿಕೊಳ್ಳಿ. ತಡವಾಗಿ ಪಾವತಿಯಾಗುವ ಬಿಲ್ಲಿನ ಮೊತ್ತಕ್ಕೆ ವಿಧಿಸಲಾಗುವ ಬಡ್ಡಿಹಣದ ಅಪವ್ಯಯವನ್ನು ತಡೆಹಾಕಿರಿ.

"ವಿದ್ಯುನ್ಮಾನ ತೀರುವಳಿ ವ್ಯವಸ್ಥೆ"ಯ ಮೂಲಕ ಬಿಲ್ಲುಗಳನ್ನು ಪಾವತಿ ಮಾಡಲು ನಿಮ್ಮ ಸಮ್ಮತಿಯನ್ನು ಸೂಚಿಸಿ ನಿಶ್ಚಿಂತರಾಗಿರಿ.

ಬೆಂಗಳೂರು ಜಲಮಂಡಲಿ